ದಿನಾಂಕ 16-06-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಬಿ.ಎ.ಬಿ ವಕೀಲರಿಂದಃ</u>**

ದಾವಾ ಆಸ್ತಿಗಳಲ್ಲಿ ನನ್ನ ಮೂರು ಜನ ಸಹೋದರರ ನಡುವೆ ಸಮನಾಗಿ ಹಿಸ್ಸೇ ಬೇಕೆಂದು ಈ ದಾವೆಯನ್ನು ಸಲ್ಲಿಸಿದ್ದೇನೆ. ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿ ನೀಡಿದ್ದೇನೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳನ್ನು ನನ್ನ ಮಾಹಿತಿಯ ಮೇರೆಗೆ ಬರೆಯಲಾಗಿದೆ. ನನ್ನ ಅಣ್ಣನಾದ ಪ್ರತಿವಾದಿಯನ್ನು ಮೊದಲಿನಿಂದಲೂ ಹಿಸ್ಸೇಯನ್ನು ಕೊಡುವಂತೆ ಕೇಳುತ್ತಾ ಬಂದಿರುತ್ತೇನೆ. ಈ ದಾವೆಯನ್ನು ಸಲ್ಲಿಸುವ ಪೂರ್ದಲ್ಲಿ ಕಡೆಯ ಬಾರಿಗೆ ಪ್ರತಿವಾದಿಯನ್ನು ದಾವಾ ಆಸ್ತಿಯನ್ನು ಹಿಸ್ಸೇಯನ್ನು ನೀಡುವಂತೆ ಕೇಳಿರುತ್ತೇನೆ. ಯಾವ ದಿನಾಂಕ, ತಿಂಗಳು ಮತ್ತು ವರ್ಷದಲ್ಲಿ ಹಿಸ್ಸೇಯನ್ನು ನೀಡುವಂತೆ ಕೋರಿದ್ದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯ ಬಳಿ ನಾನು ಎಂದಿಗೂ ಹಿಸ್ಸೇಯನ್ನು ನಿಡುವಂತೆ ಕೇಳಿಲ್ಲ ಎಂದರೆ ಸರಿಯಲ್ಲ. ಆತನ ಬಳಿ ನಾನು ಹಿಸ್ಸೇಯನ್ನು ಕೇಳದೇ ಇದ್ದರೂ ಸಹ ಕೇಳಿದ್ದೇ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಮೂಲಪುರುಷ ಬಾನಪ್ಪ ಅವರಿಗೆ ನನ್ನನ್ನು ಸೇರಿದ 3 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು. ನನ್ನ ಸಹೋದರಿಯರು ಮೊದಲೇ ದಾವಾ ಆಸ್ತಿಯ ಮೇಲೆ ಹಕ್ಕುಗಳನ್ನು ಬಿಟ್ಟುಕೊಟ್ಟಿರುವುದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಕಾರರಾಗಿ ಸೇರಿಸಿರುವುದಿಲ್ಲ. ನನ್ನ ಸಹೋದರಿಯರು ತಮ್ಮ ಸಹಿಗಳನ್ನು ಮಾಡಿ ತಮ್ಮ ಹಕ್ಕುಗಳನ್ನು ಬಿಟ್ಟುಕೊಟ್ಟಿರುತ್ತಾರೆ. ದಾವಾ ಆಸ್ತಿಯ ಮೇಲೆ ತಮ್ಮ ಹಕ್ಕುಗಳನ್ನು ಬಿಟ್ಟುಕೊಟ್ಟ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂಬ ಸೂಚನೆಗೆ ಸಾಕ್ಷಿಯು ಉತಾರಗಳು ನನ್ನ ಮತ್ತು ನನ್ನ ಸಹೋದರರ ಹೆಸರಿನಲ್ಲಿದ್ದು, ಅದರಂತೆ ಮುಂದುವರೆಸಿಕೊಂಡು ಹೋಗಲು ಸಮ್ಮತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಸಹೋದರಿಯರು ದಾವಾ ಆಸ್ತಿಯಲ್ಲಿ ತಮ್ಮ ಹಕ್ಕುಗಳನ್ನು ಬಿಟ್ಟುಕೊಟ್ಟು ಎಂದಿಗೂ ಸಮ್ಮತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

3. ನನ್ನ ಸಹೋದರಿಯರು ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಬೇಡ ನೀವೇ ತೀರ್ಮಾನ ಮಾಡಿಕೊಳ್ಳಿ ಎಂದು ತಿಳಿಸಿದ್ದರಿಂದ ಅವರನ್ನು ಪಕ್ಷಕಾರರಾಗಿ ಮಾಡಿರುವುದಿಲ್ಲ. ನನ್ನ ಸಹೋದರಿಯರಿಗೆ ಹಿಸ್ಸೇಯ ಹಕ್ಕನ್ನು ಕೊಡಬಾರದು ಎಂಬ ಯೋಚನೆಯಿಂದ ಅವರನ್ನು ಈ ದಾವೆಯಲ್ಲಿ ಉದ್ದೇಶಪೂರ್ವಕವಾಗಿ ಪಕ್ಷಕಾರರಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನೆಲ್ಲಿಬೀಡ ಗ್ರಾಮದಲ್ಲಿ ಒಟ್ಟು ಕುಟುಂಬಕ್ಕೆ ಸೇರಿದ ಸ ನಂಃ 25/1 ರ ವಿಸ್ತೀರ್ಣ 7 ಎಕರೆ 39 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ನನ್ನ ಅಣ್ಣ ಅದರ ಮೇಲೆ ಇದ್ದ ತನ್ನ ಹಕ್ಕನ್ನು ನನಗೆ ಬಿಟ್ಟುಕೊಟ್ಟಿರುವುದರಿಂದ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನೋಂದಾಯಿತ ದಾಖಲೆ ಮೂಲಕ ಸ ನಂ 25/1 ರ ಜಮೀನನ್ನು ನನಗೆ ಬಿಟ್ಟುಕೊಟ್ಟ ಬಗ್ಗೆ ದಾಖಲೆಗಳು ನನ್ನ ಬಳಿ ಇರುತ್ತವೆ. ಸದರಿ ನೋಂದಾಯಿತ ದಾಖಲೆಯನ್ನು ನ್ಯಾಯಾಲಯ ಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲಾ.

4. ಮೂಲಪುರುಷ ಬಾನಪ್ಪ ರವರು ಅವರ ಜೀವಿತಾವಧಿಯಲ್ಲಿ ಪ್ರತಿವಾದಿ ಆತನನ್ನು ಚೆನ್ನಾಗಿ ಪಾಲನೆ ಮತ್ತು ಪೋಷಣೆ ಮಾಡಿದ್ದರಿಂದ ದಾವಾ ಆಸ್ತಿಯು ಆತನಿಗೆ ಸಲ್ಲಬೇಕು ಎಂದು ಮೌಖಿಕವಾಗಿ ತಿಳಿಸಿದ್ದರು ಎಂದರೆ ಸರಿಯಲ್ಲ. ನೆಲ್ಲಿಬೀಡ ಗ್ರಾಮದ ಜಮೀನಾದ ಸ ನಂಃ 25/1 ಕ್ಕೆ ಸಂಬಂಧಿಸಿದಂತೆ ಪರಸಪ್ಪ ನನ್ನ ಪರವಾಗಿ ಯಾವುದೇ ದಾಖಲೆಗಳನ್ನು ಬರೆದುಕೊಡದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ಯಾವುದೇ ಕಾರಣಗಳು ಇಲ್ಲದೇ ಇದ್ದರೂ ಸಹ ಆತನಿಗೆ ತೊಂದರೆ ಕೊಡಲು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ದಾವಾ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಹಿಸ್ಸೇಯ ಹಕ್ಕನ್ನು ನಿರಾಕರಿಸಲು ಅವರನ್ನು ದಾವೆಯಲ್ಲಿ ಪಕ್ಷಕಾರರಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ನೆಲ್ಲಿಬೀಡ ಗ್ರಾಮದ ಸನಂಃ 25/1 ರ ಜಮೀನನ್ನು ಈ ದಾವೆಯಲ್ಲಿ

ಸೇರಿಸದೇ ಇರುವುದ ರಿಂದ ದಾವೆಯು ಊರ್ಜಿತವಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಮ್ಮ ತಂದೆಯೇ ಪ್ರತಿವಾದಿಗೆ ನೀಡಿರುವುದರಿಂದ ದಾವಾ ಆಸ್ತಿಯ ಮೇಸಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ